

(6ನೇ ಪುಟದಿಂದ)

ಬೆಳೆಯುವ ಮರ. ಇದು ನೀಲಗಿರಿ ಮರದ ಹಾಗೆ ಉದ್ದವಾಗಿ ಬೆಳೆಯುತ್ತದೆ. ಇದರ ಹೂಗಳು ಸುಗಂಧರಾಜನಿಗಿಂತ ಉದ್ದವಾಗಿ ಸುಮಾರು 4–5 ಸೆಂ.ಮೀ ನಷ್ಟು ಇರುತ್ತವೆ. ಮಲ್ಲಿಗೆಯಂತೆ ಬಿಳಿಯಾಗಿದ್ದು, 5 ದಳಗಳನ್ನು ಹೊಂದಿರುತ್ತವೆ.

ಈ ಮರ ವರ್ಷ ಋತುವಿನ ನಂತರ ಶರದ್ ಋತುವಿನಲ್ಲಿ ಹೂ ಬಿಡುತ್ತದೆ. ಅಂದರೆ ಸೆಪ್ಟೆಂಬರ್– ಅಕ್ಟೋಬರ್‌ನಲ್ಲಿ ಹೂ ಬಿಟ್ಟು, ಡಿಸೆಂಬರ್ ಅಂತ್ಯದವರೆಗೂ ಹೂವಿರುತ್ತವೆ.

ಬಹು ಎತ್ತರದ ಗಿಡವಾದ್ದರಿಂದ, ಮತ್ತು ಹೂಗಳು ಗಿಡದ ತುಂಬಾ ಗೊಂಚಲುಗಳಲ್ಲಿ ಅರಳುವುದರಿಂದ, ಬೀಸುವ ಗಾಳಿಯೊಡನೆ ಇದರ ವಿಶಿಷ್ಟ ಸುವಾಸನೆ ಸುಮಾರು ಅಡಿಗಳಷ್ಟು ದೂರದವರೆಗೆ ಹರಡಿ ಮುದ ನೀಡುತ್ತದೆ. ಮನೆಯ ಹತ್ತಿರವೇ ಈ ಮರವಿದ್ದರೆ, ಮನೆಯಂಗಳ, ಮನೆಯೊಳಗೂ ಸಹ ಫ್ರೀ ನ್ಯಾಚುರಲ್ ರೂಮ್ ಫ್ರೆಷನರ್!

ಆಕಾಶ ಮಲ್ಲಿಗೆ ಶರದ್ ಋತುವಿನಲ್ಲಿ ಹೂ ಬಿಡಲು ಪ್ರಾರಂಭಿಸುವುದರಿಂದ, ಅದರ ವಿಶಿಷ್ಟ ಸುವಾಸನೆಗಾಗಿ ಪುಷ್ಪಪ್ರಿಯರು ಶರದ್ ಋತುವನ್ನು ಕಾಯುವಂತೆ ಮಾಡುತ್ತದೆ.

ಆಕಾಶ ಮಲ್ಲಿಗೆಯ ಮರದಡಿಯಲ್ಲಿ ನೆಲದ ಮೇಲೆ ಸುಮಾರು ಅಡಿಗಳಷ್ಟು ದೂರ ಹೂಗಳು ಗಾಳಿಗೆ ಉದುರಿ ಬೀಳುವುದರಿಂದ, ಪ್ರಕೃತಿ ಇನ್ನೂ ಸುಂದರವಾಗಿ ಕಾಣಿಸುತ್ತದೆ. ಈ ಮರ ಬಹು ಬೇಗ ಬೆಳೆಯುವುದರ ಜೊತೆ, ತನ್ನ ಸನಿಹದಲ್ಲೆಲ್ಲಾ ಸಣ್ಣ ಸಣ್ಣ ಗಿಡಗಳನ್ನು ಬೆಳೆಸುತ್ತದೆ. ಆದ್ದರಿಂದ ಇದನ್ನು ಮನೆಯಿಂದ ಸ್ವಲ್ಪ ದೂರ ಬೆಳೆಯುವುದು ಕ್ಷೇಮ.